ತುಮಕೂರು ವಿಧಾನ ಸಭಾ ಕ್ಷೇತ್ರದಲ್ಲಿ ಕುಡಿಯುವ ನೀರು ಪೂರೈಕೆಗೆ ವಿದ್ಯುತ್ ಸರಬರಾಜು

331 (701) ಶ್ರೀ ಎಸ್.ಶಿವಣ್ಣ (ತುಮಕೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ನೇ ಸಾಲಿನಲ್ಲಿ ತುಮಕೂರು ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ದೀಪ ಕೋರಿ ವಿದ್ಯುತ್‌ಮಂಡಳಿಗೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಹಾಗೂ ಈ ಬಗ್ಗೆ ಮಂಡಳಿ ತೆಗೆದುಕೊಂಡ ಕ್ರಮಗಳೇನು?

ಆ) 1998-99ನೇ ಸಾಲಿನಲ್ಲಿ ಕುಡಿಯುವ ನೀರಿನ ಪೂರೈಕೆಗೆ ವಿದ್ಯುತ್ ಸರಬರಾಜು ಕೋರಿ ಜಿಲ್ಲಾ ಪಂಚಾಯತ್ ನಿಂದ ಮಂಡಳಿಗೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು ಹಾಗೂ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) 1998-99ನೇ ಸಾಲಿನಲ್ಲಿ ತುಮಕೂರು ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಬೀದಿ ದೀಪ ಕೋರಿ ಮಂಡಳಿಗೆ ಬಂದ ಪ್ರಸ್ತಾವನೆಗಳ ಒಟ್ಟು ಸಂಖ್ಯೆ :20 ಈ 20 ಪ್ರಸ್ತಾವನೆಗಳ ಪೈಕಿ 18 ಪ್ರಸ್ತಾವನೆಗಳ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಉಳಿದ 2 ಪ್ರಸ್ತಾವನೆಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಉಳಿದ ಎರಡು ಪ್ರಸ್ತಾವನೆಗಳ ಕೆಲಸಗಳನ್ನು ಕೆಳಕಂಡ ಷರತ್ತುಗಳ ಮೇರೆಗೆ ಕೈಗೊಳ್ಳಲು ಸಾಧ್ಯವಾಗುತ್ತದೆ.

1. ಹೆಚ್ಚುವರಿ ಬೀದಿ ದೀಪಗಳ ಅಳವಡಿಕೆಯ ಅಂದಾಜುಪಟ್ಟಿಯನ್ನು ಮಂಜೂರುಮಾಡುವ ಮುನ್ನ ಸಂಬಂಧಿಸಿದ ಗ್ರಾಮಪಂಚಾಯಿತಿ, ಟೌನ್‌ಮುನಿಪಾಲಿಟಿಯ ವಿದ್ಯುತ್ ಬಾಕಿಯ ಶೇಕಡ 10 ರಷ್ಟನ್ನು ಮಂಡಲಿಗೆಪಾವತಿ ಮಾಡಬೇಕಾಗುತ್ತದೆ.

2. ಗ್ರಾಮ ಪಂಚಾಯಿತಿ,ಟೌನ್ ಮುನಿಸಿಪಾಲಿಟಿಗಳು ಪ್ರತಿ ತಿಂಗಳ ಬಿಲ್ಲನ್ನು ನಿಯತವಾಗಿ ಪಾವತಿ ಮಾಡತಕ್ಕದ್ದು ಮತ್ತು ಬಾಕಿಯ ಶೇಕಡ 10 ರಷ್ಟನ್ನು ನೀಡತಕ್ಕದ್ದು.

ಆ) 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ಜಿಲ್ಲಾಪಂಚಾಯತ್‌ನಿಂದ ಕುಡಿಯುವ ನೀರಿನ ಪೂರೈಕೆಗೆ ಸಂಪರ್ಕ ಕೋರಿ ಮಂಡಳಿಗೆ 297 ಪ್ರಸ್ತಾವನೆಗಳು ಬಂದಿದೆ. ಇವುಗಳಲ್ಲಿ136 ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸ ಲಾಗಿದೆ.51 ಯೋಜನೆಗಳಿಗೆ ಮಂಡಳಿಯ ಕೆಲಸಮುಗಿದಿದ್ದು ಜಿಲ್ಲಾ ಪಂಚಾಯಿತಿಯವರು ವಿದ್ಯುತ್‌ಸಂಪರ್ಕ ಪಡೆಯಬೇಕಾಗಿದೆ. ಬಾಕಿ ಯೋಜನೆಗಳ ಪೈಕಿ 69 ಯೋಜನೆಗಳಿಗೆ ಕೆಲಸ ಪ್ರಗತಿಯಲ್ಲಿದ್ದು ಹಾಗೂ 41 ಯೋಜನೆಗಳ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಬೇಕಾಗಿದೆ.

ತುಮಕೂರು ಜಿಲ್ಲೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿ

332 (703) ಶ್ರೀ ಎಸ್.ಶಿವಣ್ಣ (ತುಮಕೂರು) : ಮಾನ್ಯ ಇಂಧನ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಗೆ ಅನುಗುಣವಾಗಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಸ್ಥಾಪಿಸುವ ಪ್ರಸ್ತಾವನೆ ಮಂಡಳಿಯ ಪರಿಶೀಲನೆಯಲ್ಲಿದೆಯೇ; ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು;

ಆ) 1998-99ನೇ ಸಾಲಿನಲ್ಲಿ ತುಮಕೂರು ವಿಧಾನ ಸಭಾ ಕ್ಷೇತ್ರದಲ್ಲಿ ಕೆಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು; ಹಾಗೂ ಬದಲಾಯಿಸಲಾದ ಟ್ರಾನ್ಸ್ ಫಾರ್ಮರ್‌ಗಳ ಸಂಖ್ಯೆ ಎಷ್ಟು, (ಕೆಪಾಸಿಟಿ ವಾರು ಮಾಹಿತಿ ನೀಡುವುದು).

ಇ) ಕೆಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಲಾಗುವುದೇ; ಅಥವಾ ವಿಲೇವಾರಿ ಮಾಡಲಾಗುವುದೇ; ರಿಪೇರಿಗಾಗಿ ಖರ್ಚಾದ ಮೊತ್ತವೆಷ್ಟು ; ವಿಲೇವಾರಿಯಿಂದ ಬಂದ ಆದಾಯ ವೆಷ್ಟು;

ಈ) ಟ್ರಾನ್ಸ್‌ಫಾರ್ಮರ್‌ಗಳು ಗ್ರಾಮಾಂತರ ಪ್ರದೇಶದಲ್ಲಿ ಜಮೀನಿನಲ್ಲಿಯೇ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯಲ್ಲಿ 1998-99ನೇ ಸಾಲಿನಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಉತ್ತಮಗೊಳಿಸಲು ವಿವಿಧ ಕಾರ್ಯಕ್ರಮಗಳಡಿಯಲ್ಲಿ ಹೆಚ್ಚುವರಿಯಾಗಿ ಒಟ್ಟು 2370 ವಿವಿಧ ಸಾಮರ್ಥ್ಯದ ವಿತರಣಾ ಪರಿವರ್ತಕಗಳನ್ನು ಸ್ಥಾಪಿಸಲು ಕಾರ್ಯಕ್ರಮ ಹಮ್ಮಿಕೊಂಡಿರುತ್ತದೆ. ಅವುಗಳ ಸಾಮರ್ಥ್ಯವಾರುವಿವರ ಕೆಳಗಿನಂತಿದೆ.

1.	25 ಕೆ.ವಿ.ಎ.	- 488	ಸಂಖ್ಯೆ
2.	63 ಕೆ.ವಿ.ಎ	- 1628	ಸಂಖ್ಯೆ
3.	100 ಕೆ.ವಿ.ಎ	- 243	ಸಂಖ್ಯೆ
4.	250 ಕೆ.ವಿ.ಎ	- 11	ಸಂಖ್ಯೆ
ಒಟ್ಟು		**2370**	**ಸಂಖ್ಯೆ**

ಆ) 1998-99ನೇ ಸಾಲಿನಲ್ಲಿ ತುಮಕೂರುವಿಧಾನ ಸಭಾ ಕ್ಷೇತ್ರದಲ್ಲಿ ಕೆಟ್ಟುಹೋದ ಹಾಗೂ ಬದಲಾಯಿಸಲಾದ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯವಾರು ವಿವರ ಕೆಳಕಂಡಂತಿದೆ :

ಕ್ರಮ ಸಂಖ್ಯೆ	ಸಾಮರ್ಥ್ಯ	ವಿಫಲ ಗೊಂಡವು	ಬದಲಾಯಿಸಲಾದವು
1.	25 ಕೆ.ವಿ.ಎ	5 ಸಂಖ್ಯೆ	5 ಸಂಖ್ಯೆ
2.	63 "	32 "	32 "
3.	100 "	73 "	73 "
4.	200 "	1 "	1 "
5.	250 "	15 "	15 "
ಒಟ್ಟು		**126 ಸಂಖ್ಯೆ**	**126 ಸಂಖ್ಯೆ**

ಇ) ಕೆಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿಮಾಡಲು ಸಾಧ್ಯವಿದ್ದಲ್ಲಿ ರಿಪೇರಿಮಾಡ ಲಾಗುವುದು. 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 692 ವಿವಿಧ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ರೂ. 104.5 ಲಕ್ಷಗಳ ವೆಚ್ಚದಲ್ಲಿ ರಿಪೇರಿ ಮಾಡಲಾಗಿದೆ. 25 ಕೆ.ವಿ.ಎ. ಸಾಮರ್ಥ್ಯದ ಹಾಗೂ 25 ಕೆ.ವಿ.ಎ ಕ್ಕಿಂತ ಹೆಚ್ಚಿನ ಸಾಮರ್ಥ್ಯದರಿಪೇರಿ ಮಾಡಲು ಬರದಂತಹ ಟ್ರಾನ್ಸ್‌ಫಾರ್ಮರ್‌ಗಳನ್ನು ವಿಲೇವಾರಿ ಮಾಡಲಾಗುವುದು. 1998-99ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವಿಭಾಗದಿಂದ ಒಟ್ಟು 25 ಕೆ.ವಿ.ಎ ಸಾಮರ್ಥ್ಯದ 1300 ಸಂಖ್ಯೆ ಟ್ರಾನ್ಸ್‌ಫಾರ್ಮರ್‌ಗಳನ್ನು ವಿಲೇವಾರಿ ಮಾಡಲಾಗಿದೆ. ಅವುಗಳಿಂದ ಬಂದ ಆದಾಯ ರೂ. 37.52 ಲಕ್ಷ ರೂ. ಗಳು.

ಈ) ಹೌದು. ಕೆಲವೊಮ್ಮೆ ನಿವಾರ್ಯ ಕಾರಣಗಳಿಂದ ವಿಫಲಗೊಂಡ ಪರಿವರ್ತಕಗಳು ಆ ಸ್ಥಳಗಳಲ್ಲಿಯೇ ಉಳಿದಿರುವ ಆ ಬಗ್ಗೆ ಮಂಡಳಿಯ ಗಮನಕ್ಕೆ ಬಂದ ತಕ್ಷಣ ಸಂಬಂಧಿಸಿದ ಉಗ್ರಾಣಗಳಿಗೆ ಸಾಗಿಸಲು ಸೂಕ್ತವ್ಯವಸ್ಥೆ ಮಾಡಲಾಗಿದೆ. ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಕೂಡಲೇ ಉಪವಿಭಾಗೀಯ ಅಥವಾ ವಿಭಾಗೀಯ ಉಗ್ರಾಣಗಳಿಗೆ ಕಳುಹಿಸಲೂ ಸಹ ಸಂಬಂಧಪಟ್ಟ ಸಿಬ್ಬಂದಿಗೆ ಸೂಕ್ತ ಆದೇಶ ನೀಡಲಾಗಿದೆ. ವಿಫಲವಾದ ಪರಿವರ್ತಕಗಳನ್ನು ಉಗ್ರಾಣಗಳಿಗೆ ಕಳುಹಿಸಲಾಗಿದೆ.

ವಿದ್ಯುಚ್ಛಕ್ತಿ ಮಂಡಳಿಯಿಂದ ಸೆಲ್ಫ್ ಫೈನಾನ್ಸ್ ಯೋಜನೆ ಜಾರಿ

333 (715) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸಂಪರ್ಕ ಪಡೆಯುವವರೇ ಸೆಲ್ಫ್ ಫೈನಾನ್ಸ್ ಯೋಜನೆ ಅಳವಡಿಸುವ ಉದ್ದೇಶ ಸರ್ಕಾರಕ್ಕಿದೆಯೇ? ಈ ನಿಟ್ಟಿನಲ್ಲಿ ಇಲಾಖೆ ಕೈಗೊಂಡ ಕ್ರಮಗಳೇನು?

ಆ) ವಿದ್ಯುತ್ ಇಲಾಖೆಯಲ್ಲಿ ಫಲಾನುಭವಿಗಳಿಗೆ ಸಾಮಗ್ರಿಗಳ ಕೊರತೆಯಿಂದ ಕಲ್ಪಿಸಂಪರ್ಕಸುವಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಪ್ರಸ್ತುತ ನೀರಾವರಿ ಸಂಪ್ ಸೆಟ್‌ಗಳಿಗೆವಿದ್ಯುತ್ ಸಂಪರ್ಕ ಪಡೆಯಲು ಮಾತ್ರ 'ಸೆಲ್ಫ್ ಫೈನಾನ್ಸ್' ಯೋಜನೆ ಯು.ಕೆ.ವಿ ಮಂಡಳಿಯಲ್ಲಿ ಜಾರಿಯಲ್ಲಿದೆ. ಈಯೋಜನೆಯಾನುಸಾರ ತಮ್ಮ ನೀರಾವರಿ ಪಂಪ್‌ಸೆಟ್‌ಗಳಿಗೆ ಆದ್ಯತೆಯ ಹೊರತಾಗಿ ವಿದ್ಯುತ್ ಸಂಪರ್ಕ ಪಡೆಯಲ್ಲಿಚ್ಛಿಸುವ ಅರ್ಜಿದಾರರು ಮಂಡಳಿಗೆ ನಿಗಧಿತ ಮೊತ್ತವನ್ನು ಪಾವತಿ ಮಾಡಿ ಮಂಡಳಿಯ ಇತರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಆದರೆ ಈ ಯೋಜನೆಯು ಐಚ್ಛಿಕವಾಗಿರುತ್ತದೆ.